ಉತ್ತರ ಬಂದಿದೆ? ಬರದಿದ್ದರೆ, ಎಷ್ಟು ದಿನಗಳಲ್ಲಿ ಅವರಿಂದ ನಿವೇಶನವನ್ನು ಪಡೆದುಕೊಳ್ಳಲು ವ್ಯವಸ್ಥೆಯನ್ನು ಮಾಡುವಿರಿ? ಎರಡನೆಯದು, ಜಿಲ್ಲಾ ನ್ಯಾಯಾಲಯಗಳಿಗೆ ಈ ನಿವೇಶನ ಸೂಕ್ತವೇ ಎಂಬ ಬಗ್ಗೆ ಬರೆದಿದ್ದೇವೆಂದು ಅದನ್ನು ತಾವು ಪ್ರಸ್ತಾಪಿಸಿದ್ದೀರಿ. ಅವರಿಂದ ಏನಾದರೂ ನಿಮಗೆ ಉತ್ತರ ಬಂದಿದೆಯೇ? ಬರದಿದ್ದರೆ ತಾವು ಎಷ್ಟು ದಿವಸಗಳಲ್ಲಿ ತರಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡುತ್ತೀರಿ? ಇವೆಲ್ಲವನ್ನೂ ಬೇಗ ತರಿಸಿಕೊಂಡು ನಮ್ಮ ಬೀಳಗಿಗೆ ನ್ಯಾಯಾಲಯದ ಕಟ್ಟಡ ನಿರ್ಮಾಣ ಕಾರ್ಯವನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡುತ್ತೀರೆಂದು ಒಂದು ಸ್ಪಷ್ಟವಾದ ಉತ್ತರವನ್ನು ಪಡೆಯುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, 1993ನೇ ಇಸವಿಯಲ್ಲಿ ಬೀಳಗಿಯಲ್ಲಿ ಮ್ಯಾನಿಸಿಪಲ್ ಫಸ್ಟ್ ಕ್ಲಾಸ್ ಮೈಜಿಸ್ಟ್ರೇಟ್ ಕೋರ್ಟನ್ನು ತೆರೆದಿದ್ದೇವೆ. ಅದು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿದೆ. ಕೃಷ್ಣಾ ಮೇಲ್ದಂಡೆ ವ್ಯವಸ್ಥಾಪಕ ನಿರ್ದೇಶಕರಿಗೆ ನಾಲ್ಕು ಎಕರೆ ಜಮೀನು ಕೊಡಬೇಕೆಂದು ಹೈಕೋರ್ಟ್‌ನವರು ಜಿಲ್ಲಾ ಸೆಷನ್ ನ್ಯಾಯಾಧೀಶರನ್ನು ಕೇಳಿದ್ದಾರೆ. ಮತ್ತು ಅಲ್ಲಿರುವಂತಹ ಜಾಗ ಕಟ್ಟಡದ ನಿರ್ಮಾಣಕ್ಕೆ ಸರಿಹೊಂದುವುದೇ ಹೇಗೆ ಎನ್ನುವುದನ್ನು ತಾವು ಹೋಗಿ ನೋಡಿ ಕೊಂಡು ಬರಬೇಕೆಂದು ಉಚ್ಚನ್ಯಾಯಾಲಯದವರು ಆ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಿಗೆ ತಿಳಿಸಿದ್ದಾರೆ. ಈ ಪ್ರಸ್ತಾವನೆ ಈಗ ಹೈಕೋರ್ಟಿಗೆ ಇನ್ನೂ ಬಂದಿಲ್ಲ. ನಾನು ಇದರ ಬಗ್ಗೆ ಈಗಾಗಲೇ ನಮ್ಮ ಕಾರ್ಯದರ್ಶಿಯವರಿಗೆ ಈ ಪ್ರಸ್ತಾವನೆಯನ್ನು ಕೂಡಲೇ ತರಿಸಿಕೊಳ್ಳುತ್ತೇನೆ, ನಾಳೆ ಉಚ್ಚನ್ಯಾಯಾಲಯದವರು ಇದಕ್ಕೆ ಒಪ್ಪಿ, ನಂತರ ಅದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು, ಅಲ್ಲಿಂದ ನಮ್ಮ ಇಲಾಖೆಗೆ ಬಂದ ಮೇಲೆ ನಾನು ಈ ಕ್ರಮವನ್ನು ತೆಗೆದುಕೊಳ್ಳುತ್ತೇನೆ. 1995-96ನೇ ಸಾಲಿಗೆ ಈ ಉದ್ದೇಶಕ್ಕಾಗಿ ನಾವು ಅನುದಾನವನ್ನು ಬಿಡುಗಡೆ ಮಾಡಿಲ್ಲ. ಮಂಜೂರಾತಿ ಆಗಿಲ್ಲ. ಮುಂದಿನ ವರ್ಷ ಇದನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಬೆಂಗಳೂರು ಮ್ಯಾಜಿಸ್ಟ್ರೇಟ್ ಕೋರ್ಟ್ ಆವರಣದಲ್ಲಿ ಕ್ಯಾಂಟಿನ್ ವ್ಯವಸ್ಥೆ ಇಲ್ಲದೇ ಇರುವುದು.

2281 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್ ಕಾಂಪ್ಲೆಕ್ಸ್ ಆವರಣದಲ್ಲಿ ಕ್ಯಾಂಟೀನ್ ವ್ಯವಸ್ಥೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಟೆಂಡರ್ ಕರೆಯಲಾಗಿದೆಯೇ?

ಇ) ಈ ಕಾಂಪ್ಲೆಕ್ಸ್‌ನಲ್ಲಿ ಕ್ಯಾಂಟೀನ್ ವ್ಯವಸ್ಥೆಯನ್ನು ಒದಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಕ್ಯಾಂಟೀನ್ ವ್ಯವಸ್ಥೆ ಇದೆ.

ಆ) ಲೀವ್ ಅಂಡ್ ಲೈಸೆನ್ಸ್ ಅಗ್ರಿಮೆಂಟ್ ಪ್ರಕಾರ ಪ್ರಿನ್ಸಿಪಲ್ ಸಿಟಿ ಸಿವಿಲ್ ಅಂಡ್ ಸೆಷನ್ಸ್ ನ್ಯಾಯಾಧೀಶರು ಈ ಕ್ಯಾಂಟೀನುಗಳನ್ನು ನಡೆಸಲು ಅನುಮತಿ ನೀಡಿರುತ್ತಾರೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗಾ ರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಮ್ಯಾಜಿಸ್ಟೇಟ್ ಕೋರ್ಟ್ ಕಾಂಪ್ಲೆಕ್ಸ್ ಆವರಣದಲ್ಲಿ ಕ್ಯಾಂಟೀನ್ ವ್ಯವಸ್ಥೆ ಇಲ್ಲವೆಂದು ನನ್ನ ಗಮನಕ್ಕೆ ಬಂದಿತ್ತು. ಆದರೆ ಸನ್ಮಾನ್ಯ ಸಚಿವರು ಕ್ಯಾಂಟೀನ್ ವ್ಯವಸ್ಥೆ ಇದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ.

ಯಾದಗಿರಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆ

2518 - ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಯಾದಗಿರಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಒಟ್ಟು ಕುಡಿಯುವ ನೀರು ಸರಬರಾಜು ಯೋಜನೆಗಳೆಷ್ಟು (ಕಿರು ನೀರು ಸರಬರಾಜು ಪೈಪ್ ಮೂಲಕ ಸರಬರಾಜು ಮಾಡುವ ಕುಡಿಯುವ ನೀರಿನ ಯೋಜನೆ ಇತರೆ ಎಲ್ಲಾ ವಿವರಗಳನ್ನು ನೀಡುವುದು)*

ಆ) *ಈ ಯೋಜನೆಗಳು ಸಮರ್ಪಕವಾಗಿ ನಡೆಯುತ್ತಿವೆಯೇ? ಇಲ್ಲದಿದ್ದಲ್ಲಿ ಕಾರಣವೇನು?*

ಇ) *ಈ ಯೋಜನೆಗಳಿಗೆ ಅಗತ್ಯವಿರುವಷ್ಟು ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆಯೇ?*

ಈ) *ಮಾಡದಿದ್ದರೆ ಯಾವಾಗ ಹಣವನ್ನು ಬಿಡುಗಡೆ ಮಾಡಲಾಗುವುದು?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು): ಅ) ಯಾದಗಿರಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಕುಡಿಯುವ ನೀರು ಸರಬರಾಜು ಯೋಜನೆಗಳು : 1113

ಇತರೆ ವಿವರಗಳು ಕೆಳಗಿನಂತಿವೆ.

ಕೈಪಂಪು ಕೊಳವೆ ಬಾವಿಗಳು	:	862
ಕಿರು ನೀರು ಸರಬರಾಜು ಯೋಜನೆಗಳು	:	179
ಕೊಳವೆ ನೀರು ಸರಬರಾಜು ಯೋಜನೆಗಳು	:	72
		1113

ಆ) ಪೂರ್ಣಗೊಂಡಿರುವ ಯೋಜನೆಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ.

ಇ) ಹೌದು

ಈ) ಕಾರ್ಯಕ್ರಮದಂತೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಮಂತ್ರಿಗಳು ಕೊಟ್ಟಂಥ ಉತ್ತರದಲ್ಲಿ ಕೈಪಂಪು ಕೊಳವೆ ಬಾವಿಗಳು 862, ಕಿರು ನೀರು ಸರಬರಾಜು ಯೋಜನೆಗಳು 179 ಮತ್ತು ಕೊಳವೆ ನೀರು ಸರಬರಾಜು ಯೋಜನೆಗಳು 72. ಹೀಗೆ ಒಟ್ಟು 1113 ಎಂದು ಹೇಳಿದ್ದಾರೆ. ಇದರಲ್ಲಿ ಈಗ ಎಷ್ಟು ಜಾಲ್ತಿಯಲ್ಲಿವೆ ಮತ್ತು ಎಷ್ಟು ದುರಸ್ತಿ ಮಾಡತಕ್ಕಂತಹ ವ್ಯವಸ್ಥೆಯಲ್ಲಿವೆ ಎನ್ನುವುದನ್ನು ಸ್ಪಷ್ಟಪಡಿಸಬೇಕು, ಇದು ಮೊದಲನೆಯದು, ಎರಡನೆಯದು, ಹೊಸದಾಗಿ ಮಂಜೂರಾದವು ಎಷ್ಟು? ಅವನ್ನು ಯಾವಾಗ ಪೂರ್ಣಗೊಳಿಸುತ್ತೀರಿ, ಕೆಲವಕ್ಕೆ ವಿಶೇಷ ಅನುದಾನವನ್ನು ಒಂದು ಯೋಜನೆ ಅಡಿಯಲ್ಲಿ ಕೊಡಲಾಗಿತ್ತು. ಅಂದರೆ, ನಿರ್ದಿಷ್ಟವಾಗಿ ನಮ್ಮ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಈ ಕೆ.ಇ.ಬಿ. ಯವರು ಎಲೆಕ್ಟ್ರಿಕ್ ವೈಯರ್